
# ಗರ್ಭಕೋಶ ಜಾರುವಿಕೆ; ಆತಂಕ ಏಕೆ?



**ಪದೇ ಪದೇ ಮಕ್ಕಳನ್ನು ಹಡೆಯುವುದು, ಒಂದು ಮಗುವಿಗೂ ಇನ್ನೊಂದು ಮಗುವಿಗೂ ಹೆಚ್ಚು ಅಂತರವಿಲ್ಲದಿರುವುದು, ಹೆರಿಗೆಯ ನಂತರ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳದೇ ಇರುವುದು, ಕಷ್ಟಕರ ಹೆರಿಗೆಯಾದಾಗ.. ಹೀಗೆ ಅನೇಕ ಕಾರಣಗಳಿಂದ ಗರ್ಭಕೋಶ ಜಾರುವ ಸಾಧ್ಯತೆ ಇದೆ. ಶಸ್ತ್ರಚಿಕಿತ್ಸೆ ಮೂಲಕ ಈ ಸಮಸ್ಯೆಗೆ ಪರಿಹಾರ ಸಿಗುವ ಕಾರಣ ಆತಂಕ ಪಡುವ ಅಗತ್ಯವೇ ಇಲ್ಲ.**

★ ಡಾ.ವೀಣಾ ಭಟ್, ಭದ್ರಾವತಿ

ನಾಲ್ಕು ಮಕ್ಕಳ ತಾಯಿಯಾದ 60 ವರ್ಷದ ಮಾದೇವಮ್ಮ ಮಗಳು ಗೀತಾಳೊಂದಿಗೆ ಆಸ್ಪತ್ರೆಗೆ ಬಂದಿದ್ದರು. ‘ನೋಡಿ ಮೇಡಂ ಮುಟ್ಟು ನಿಂತು 15 ವರ್ಷನೇ ಆಯಿತು. ಈಗೇನೋ ಕೆಂಪು ಬಿಳಿ ನೀರು ತರ ಹೋಗ್ತಿದೆ ಎಂದು ಒಂದು ವರ್ಷದಿಂದ ಹೇಳ್ತಾನೇ ಇದಾರೆ, ತೋರಿಸ್ಕೊಳೋದಕ್ಕೇ ಒಪ್ಕೋತಾನೇ ಇಲ್ಲ. ಇವತ್ತು ಅವರನ್ನು ಕಷ್ಟಪಟ್ಟು ಕರೆದುಕೊಂಡು ಬಂದಿದ್ದೀನಿ, ಸ್ವಲ್ಪ ನೋಡಿ’ ಎಂದಳು. ಅವರನ್ನು ತಪಾಸಣೆ ಮಾಡಿದಾಗ ಅವರಿಗೆ ಗರ್ಭಕೋಶ ಜಾರಿದ್ದು ತುಂಬಾ ದಿನ ಹಾಗೇ ಬಿಟ್ಟಿದ್ದರಿಂದ ಗರ್ಭಕಂಠದಲ್ಲಿ ಹುಣ್ಣಾಗಿ ಕೆಂಪು ಬಿಳಿ ಮಿಶ್ರಿತ ನೀರಿನ ಸ್ರಾವವಾಗುತ್ತಿತ್ತು.

***

ಆರು ಮಕ್ಕಳ ತಾಯಿಯಾದ ಸೌಭಾಗ್ಯಮ್ಮ ಗರ್ಭಕೋಶ ಸಂಪೂರ್ಣ ಹೊರಗಡೆ ಜಾರಿದ್ದು ಓಡಾಡುವುದಕ್ಕೆ ಸಾಧ್ಯವಾಗದಿದ್ದರೂ ಆಪರೇಷನ್‌ಗೆ ಹೆದರಿ ಆಸ್ಪತ್ರೆಗೆ ಬರಲೇ ಇಲ್ಲ. ತುಂಬಾ ದಿನಗಳ ನಂತರ ಮೂತ್ರಪಿಂಡಗಳವರೆಗೆ ತೊಂದರೆಯಾಗಿ ಮೂತ್ರ ಬರುವುದೇ ನಿಂತಾಗ ಮಕ್ಕಳು ಬಲವಂತವಾಗಿ ಆಸ್ಪತ್ರೆಗೆ ಕರೆ ತಂದಿದ್ದರು. ಪರೀಕ್ಷಿಸಿದಾಗ ಗರ್ಭಕೋಶ ಜಾರಿ ಸಂಪೂರ್ಣ ಹೊರಗಿತ್ತು.

***

ಮೂರು ದಶಕಗಳ ಹಿಂದೆ ನಾವೆಲ್ಲಾ ವಿದ್ಯಾರ್ಥಿಗಳಿದ್ದಾಗ ಶೇಕಡಾ 80ರಷ್ಟು ಗೈನೆಕ್ವಾರ್ಡ್ ಅಡ್ಮಿಷನ್‌ಗಳು ಕೇವಲ ಈ ಗರ್ಭಕೋಶ ಜಾರುವಿಕೆ (ಪ್ರೊಲಾಪ್ಸ್) ಕೇಸುಗಳೇ ಇರುತ್ತಿದ್ದು ಇತ್ತೀಚೆಗೆ ಸ್ವಲ್ಪ ಕಡಿಮೆ ಎಂದು ಹೇಳಬಹುದು. ಆದರೂ ಆಗೊಮ್ಮೆ ಈಗೊಮ್ಮೆ ಗರ್ಭಕೋಶ ಜಾರುವಿಕೆಯಂತಹ ಸಮಸ್ಯೆಯಿಂದ ಆಸ್ಪತ್ರೆಗೆ ಬರುತ್ತಾರೆ.

50 ವರ್ಷ ಮೇಲ್ಪಟ್ಟ ಹೆಚ್ಚಿನ ಜನರಿಗೆ ಗರ್ಭಕೋಶ ಜಾರುವಿಕೆಯೇ ಅದನ್ನು ತೆಗೆಯಲು ಮುಖ್ಯ ಕಾರಣ. ಬೇರೆ ಬೇರೆ ಅಂಗಗಳು ವಯೋ ಸಹಜವಾಗಿ ಶಿಥಿಲವಾಗುವಂತೇ ಮುಟ್ಟು ನಿಂತ ಮೇಲೆ ಗರ್ಭಾಶಯ ಕೆಳಗೆ ಜಾರಲು ಆರಂಭವಾಗುತ್ತದೆ.

## ಸಹಜ ಗರ್ಭಕೋಶ ಹೇಗಿರುತ್ತದೆ?

ಗರ್ಭಾಶಯ ಅಸ್ಥಿಕುಹರದ ಗೂಡಿನಲ್ಲಿದ್ದು ಸ್ನಾಯುಗಳು ಹಾಗೂ ಸ್ನಾಯುತಂತುಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಮಹಿಳೆ ಭಾರವನ್ನು ಎತ್ತಿದ್ದಾಗ, ಕುಕ್ಕರಗಾಲಿನಲ್ಲಿ ಕುಳಿತರೆ, ಕೆಮ್ಮಿದಾಗ, ಸೀನಿದಾಗ, ಗರ್ಭ ಧರಿಸಿದಾಗ ಈ ಗರ್ಭಕೋಶ ಸ್ವಸ್ಥಾನದಲ್ಲೇ ಇದ್ದು ಹೊರಗೆ ಜಾರುವುದಿಲ್ಲ.

## ಗರ್ಭಕೋಶ ಜಾರಲು ಕಾರಣಗಳೇನು?

ವಯೋಸಹಜವಾಗಿ ಮುಟ್ಟು ನಿಂತ ಮೇಲೆ ಹೆಣ್ತನದ ಹಾರ್ಮೋನುಗಳ ಪ್ರಭಾವ ಕಡಿಮೆ ಆಗುತ್ತಾ ಬಂದು ಗರ್ಭಕೋಶ ಸಣ್ಣದಾಗುತ್ತಾ ಬರುತ್ತದೆ. ಜೊತೆಗೆ ಅದಕ್ಕೆ ಆಧಾರವಾಗಿರುವ ತಂತುಗಳು ಮತ್ತು ಸ್ನಾಯುಗಳ ಶಕ್ತಿಯೂ ಕಡಿಮೆ ಆಗುವುದರಿಂದ ತನ್ನ ಸ್ಥಾನದಲ್ಲಿ ಉಳಿಯದೇ ಕೆಳಗೆ ಜಾರಿ ಬಿಡುತ್ತದೆ. ಮೊದಲು ಸ್ವಲ್ಪ ಜಾರುತ್ತಾ ಬಂದು ನಂತರ ವಯಸ್ಸಾದ ಹಾಗೇ ಪೂರ್ತಿಯಾಗಿ ಕೆಳಗೆ ಕಸಿಯಬಹುದು. ಅಪರೂಪಕ್ಕೆ ಚಿಕ್ಕವಯಸ್ಸಿನಲ್ಲೇ ಈ ಗರ್ಭಾಶಯದ ಜಾರುವಿಕೆ ಕಾಣಿಸಿಕೊಂಡರೆ ಅದು ಸ್ನಾಯುಗಳು ಅಶಕ್ತತೆಯಿಂದಿರುತ್ತದೆ. ನರತಂತುಗಳಿಗೂ ತೊಂದರೆಯಾಗಿರಬಹುದು.

ಪದೇ ಪದೇ ಮಕ್ಕಳನ್ನು ಹಡೆಯುವುದು, ಒಂದು ಮಗುವಿಗೂ ಇನ್ನೊಂದು ಮಗುವಿಗೂ ಹೆಚ್ಚು ಅಂತರವಿಲ್ಲದಿರುವುದು, ಹೆರಿಗೆಯ ನಂತರ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳದೇ ಇರುವುದು, ಕಷ್ಟಕರ ಹೆರಿಗೆಯಾದಾಗ, ದೀರ್ಘಾವಧಿ ಹೆರಿಗೆಯಾದಾಗ ಮಹಿಳೆ ಗರ್ಭಕಂಠವೂ ಪೂರ್ತಿಯಾಗಿ ತೆರೆದುಕೊಳ್ಳದೇ ಇದ್ದಾಗಲೇ ಜೋರಾಗಿ ಮುಕ್ಕುವ ಪ್ರಯತ್ನ ಮಾಡುತ್ತಿದ್ದರೆ, ಗರ್ಭಾಶಯವನ್ನು ಸ್ವಸ್ಥಾನದಲ್ಲಿಡುವ ತಂತುಗಳು ಹಿಗ್ಗಿ, ಸಡಿಲವಾಗಿ ಮತ್ತೆ ಪುನಃ ಮೊದಲಿನ ಸ್ಥಿತಿಗೆ ಬರದೇ ಇದ್ದಾಗ ಈ ರೀತಿ ಜಾರಲು ಆರಂಭವಾಗುತ್ತಿದೆ.

ಅತಿ ದೊಡ್ಡಗಾತ್ರದ ಮಗುವನ್ನು ಹಡೆದಾಗಲೂ, ಕಸ ಅಥವಾ ಪ್ಲಾಸೆಂಟ ಬರದಿದ್ದಾಗ ಜೋರಾಗಿ ಎಳೆದಾಗಲೂ ಗರ್ಭಾಶಯದ ತಂತುಗಳಿಗೆ

